

ಜೆರುಸಲೇಂ ನಗರದ ಡೋಮ್ ಆಫ್ ದಿ ರಾಕ್ ಗುಮ್ಮಟದ ವೈಮಾನಿಕ ನೋಟ.

ಸಂಕಲ್ಪಶಕ್ತಿಗೆ ಹೆಸರಾದ ಕೆಲವು ಅಸಾಧಾರಣ ದೇಶಗಳ ಯಾದಿಯಲ್ಲಿ ಇಸ್ರೇಲ್ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಇದರ ಒಳಹೊಕ್ಕು ದಕ್ಕಿದಷ್ಟು ಪರಿಚಯ ಮಾಡಿಕೊಳ್ಳುತ್ತ ಹೋದರೆ ಬೆರಗುಗೊಳಿಸುವಂತಹ ಅನೇಕ ಸಂಗತಿಗಳು ಕಣ್ಣಮುಂದೆ ಹಾದು ಹೋಗುತ್ತವೆ. ಅದರ ಧೀಶಕ್ತಿ ಅರಿವಿಗೆ ಬರುತ್ತದೆ. ಸರಿಸುಮಾರು ಇಪ್ಪತ್ತು ಸಾವಿರ ಚದರ ಕಿಲೊಮೀಟರ್ ವಿಸ್ತೀರ್ಣ ಹೊಂದಿದ ದೇಶ. ಜನಸಂಖ್ಯೆಯು ನಮ್ಮ ಬೆಂಗಳೂರಿನ ಜನಸಂಖ್ಯೆಗಿಂತ ಕಡಿಮೆ. ಆದರೆ ಕೃಷಿ, ಕುಡಿಯುವ ನೀರು, ಮಾಹಿತಿ ತಂತ್ರಜ್ಞಾನ, ನ್ಯಾನೊ ಟೆಕ್ನಾಲಜಿ, ರಕ್ಷಣಾ ಸಾಮಗ್ರಿ ಒಳಗೊಂಡಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಮೂಡಿಸಿರುವ ಹೆಜ್ಜೆಗುರುತುಗಳು ಈ ದೇಶದ ಮುಕುಟಕ್ಕೆ ಹೊನ್ನ ಹೊಳಪು ಮೂಡಿಸಿವೆ.

ಭಾರತ ಸ್ವಾತಂತ್ರ್ಯ ಪಡೆದದ್ದು 1947ರಲ್ಲಿ. ಇಸ್ರೇಲ್ ಜನ್ಮ ತಳೆದದ್ದು 1948ರಲ್ಲಿ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನಾಜಿಗಳ ಜನಾಂಗೀಯ ದ್ವೇಷಕ್ಕೆ, ನರಮೇಧಕ್ಕೆ ಸುಮಾರು ಅರವತ್ತು ಲಕ್ಷ ಯಹೂದಿಯರು ಹತರಾದ ನಂತರ ಅಸ್ಮಿತೆಯ ಹುಡುಕಾಟದ ಭಾಗವಾಗಿ ಮತ್ತು ತಮ್ಮದೇ ಸ್ವತಂತ್ರ ರಾಷ್ಟ್ರವಿರಬೇಕು ಎಂಬ ಉತ್ಕಟ ಹಂಬಲದಿಂದ ಒಡಮೂಡಿದ ದೇಶ. ಜಗತ್ತಿನ ಬೇರೆ ಬೇರೆ ಕಡೆ ಚದುರಿಹೋಗಿದ್ದ ಯಹೂದಿಯರು ವಾಪಸು ಬಂದು ಕಟ್ಟಿದ ನಾಡು. ಈ 74 ವರ್ಷಗಳಲ್ಲಿ ಅಭದ್ರ ಭಾವ ಮತ್ತು ಸಂಘರ್ಷಗಳ ನಡುವೆಯೇ ಛಾಪು ಮೂಡಿಸಿದೆ. ಬ್ರಿಟಿಷ್ ವಸಾಹತು ದೇಶಗಳ ಪೈಕಿ ಕಡಿಮೆ ಅವಧಿಯಲ್ಲಿ ಹೆಚ್ಚು ಅಭಿವೃದ್ಧಿ ಕಂಡ ದೇಶವಾಗಿ ಇಂದು ಜಗತ್ತಿನ ಗಮನ ಸೆಳೆದಿದೆ.

ನಾಗಾಲೋಟದಲ್ಲಿ ಮುಂದಡಿ ಇಟ್ಟಿರುವ ಈ ಪುಟ್ಟ ದೇಶಕ್ಕೆ ಭೇಟಿ ನೀಡುವ ಅವಕಾಶ ಈಚೆಗೆ ದೊರೆಯಿತು. ಇಸ್ರೇಲ್ ಎಂದಾಕ್ಷಣ ಮೊದಲಿಗೆ ನೆನಪಾಗುವ ನಗರವೇ ಜೆರುಸಲೇಂ. ಅದ್ಭುತ ಚಿತ್ರಕಲಾಕೃತಿಯೊಂದರ ಚೆಲುವಿಗೆ ಹೋಲಿಸಬಹುದಾದ ನಗರ. ಪ್ರಾಚೀನತೆಯ ಸೊಬಗು

ಜೆರುಸಲೇಂ ಹಳೆಯ ನಗರದ ದೊಲೊರೊಸ ಚರ್ಚ್

